ಗರ್ಭಕೋಶದ ಗಡ್ಡೆಗೆ ಸಂಬಂಧಿಸಿದಂತೆ ಕೆಲವೊಂದು ಪ್ರಶ್ನೆಗಳು ಮಹಿಳೆಯರನ್ನು ಕಾಡುತ್ತಲೇ ಇರುತ್ತವೆ. ಮಹಿಳೆಯರ ಮನಸ್ಸಿನಲ್ಲಿರುವ ಸಂಶಯ, ಅನುಮಾನಗಳಿಗೆ ಡಾ. ವಿದ್ಯಾ ಹೀಗೆ ಉತ್ತರಿಸಿದ್ದಾರೆ.

◆ ಗರ್ಭಕೋಶದಲ್ಲಿ ಸಾಮಾನ್ಯವಾಗಿ ಯಾವ ವಯಸ್ಸಿನಲ್ಲಿ ಗಡ್ಡೆಗಳು ಕಾಣಿಸಿಕೊಳ್ಳಲಾರಂಭಿಸುತ್ತವೆ?

ಗರ್ಭಕೋಶದಲ್ಲಿ ಗಡ್ಡೆಗಳು ಸುಮಾರು 15ರಿಂದ 50 ವರ್ಷದೊಳಗಿನ ಮಹಿಳೆಯರಲ್ಲಿ ಕಂಡುಬರುತ್ತವೆ. ಇವು ಈಸ್ಟ್ರೋಜನ್ ಹಾರ್ಮೋನ್ ಸಂಬಂಧಿತವಾಗಿರುತ್ತವೆ.

◆ ಗರ್ಭಕೋಶದ ಗಡ್ಡೆಗಳನ್ನು ತೆಗೆದುಹಾಕಲು ಇರುವ ಉಪಾಯಗಳೇನು?

ಗರ್ಭಕೋಶದ ಗಡ್ಡೆಗಳು ಕ್ಯಾನ್ಸರ್‌ಕಾರಕವಲ್ಲ. ಆದರೆ ಅಪರೂಪದ ಪ್ರಕರಣಗಳಲ್ಲಿ ಗರ್ಭಕೋಶದ ಕ್ಯಾನ್ಸರ್ ಕಾಣಿಸಿಕೊಳ್ಳುವ ಸಾಧ್ಯತೆಯೂ ಇದೆ. ಗರ್ಭಕೋಶದ ಗಡ್ಡೆಗಳು ಗಾತ್ರದಲ್ಲಿ ಮೂರರಿಂದ ನಾಲ್ಕು ಸೆಂಮೀ. ನಷ್ಟು ದೊಡ್ಡದಿದ್ದರೆ ಅದು ಋತುಬಂಧದ ನಂತರ ಕರಗಿಹೋಗುತ್ತದೆ. ಆದರೆ ಗಡ್ಡೆಗಳು 7–8 ಸೆಂಮೀ.ನಷ್ಟು ದೊಡ್ಡದಾಗಿದ್ದರೆ ಲ್ಯಾಪರೊಸ್ಕೋಪಿಕ್ ಶಸ್ತ್ರಚಿಕಿತ್ಸೆಯೇ ದಾರಿ.

◆ ಹಿಸ್ಟರೆಕ್ಟಮಿ (ಗರ್ಭಕೋಶವನ್ನು ತೆಗೆದುಹಾಕುವ ಶಸ್ತ್ರಚಿಕಿತ್ಸೆ) ನಂತರ ಮಹಿಳೆ ಎದುರಿಸಬೇಕಾದ ಸಮಸ್ಯೆಗಳೇನು?

ಹಿಸ್ಟರೆಕ್ಟಮಿಯನ್ನು ಯುವತಿಯರಲ್ಲಿ ಮಾಡಿದರೆ ಹಲವು ಸಮಸ್ಯೆಗಳು ಎದುರಾಗುತ್ತವೆ. ಮೂಳೆಗಳು ಸಡಿಲವಾಗುತ್ತವೆ (ಆಸ್ಟಿಯೊಪೊರೋಸಿಸ್) , ಹೃದಯ ಸಂಬಂಧಿ ಕಾಯಿಲೆಗಳು ಬೇಗನೆ ಬರುತ್ತದೆ. ಮುಂದೆ ಲೈಂಗಿಕಾಸಕ್ತಿ ಕುಂದುತ್ತದೆ. ಹೀಗಾಗಿ ಹಿಸ್ಟರೆಕ್ಟಮಿಯನ್ನು 45ರಿಂದ 50ರ ವಯಸ್ಸಿನ ಮಹಿಳೆಯರಿಗೆ ಮಾಡಿದರೆ ಸೂಕ್ತ.

◆ ಮಧುಮೇಹದಂತಹ ಜೀವನಶೈಲಿ ಕಾಯಿಲೆಗೂ ಗರ್ಭಕೋಶದ ಗಡ್ಡೆಗಳಿಗೂ ಏನಾದರೂ ಸಂಬಂಧವಿದೆಯೇ?

ಗರ್ಭಕೋಶದ ಗಡ್ಡೆಗಳಿಗೂ, ಮಧುಮೇಹಕ್ಕೂ ಯಾವುದೇ ಸಂಬಂಧವಿಲ್ಲ. ಮಧುಮೇಹಿಗಳು ಸಾಕಷ್ಟು ಮುನ್ನೆಚ್ಚರಿಕೆ ವಹಿಸಬೇಕು. ರಕ್ತದಲ್ಲಿ ಸಕ್ಕರೆ ಮಟ್ಟವನ್ನು ಚೆನ್ನಾಗಿ ಕಾಯ್ದುಕೊಳ್ಳಬೇಕು. ಬೊಜ್ಜು, ಅತಿತೂಕ ಆಗದಂತೆ ಎಚ್ಚರಿಕೆ ವಹಿಸಿದರೆ ಗರ್ಭಕೋಶ ಗಡ್ಡೆ ಸೇರಿದಂತೆ ಉಳಿದೆಲ್ಲ ಅಪಾಯಗಳಿಂದ ಪಾರಾಗಬಹುದು.

## ಹಾರ್ಮೋನ್‌ಗೆ ಸಂಬಂಧಿಸಿದ್ದು...




ಡಾ. ವಿದ್ಯಾ ಭಟ್

ಗರ್ಭಿಣಿಯರನ್ನೂ ಈ ಗಡ್ಡೆಗಳು ಕಾಡುವುದುಂಟು. ಕೆಲವು ಮಹಿಳೆಯರಲ್ಲಿ ಗರ್ಭಧಾರಣೆಗೂ ಈ ಗಡ್ಡೆಗಳು ಬಾಧಿಸಬಹುದು. ಗರ್ಭಪಾತವಾಗುವ ಸಂಭವವೂ ಇದೆ. ಹೆರಿಗೆ ಸಂದರ್ಭದಲ್ಲಿ ಮಗು ಹೊರಗೆ ಬರಲು ಈ ಗಡ್ಡೆಗಳು ಅಡ್ಡಿಪಡಿಸುವ ಸಾಧ್ಯತೆಯೂ ಇದೆ. ಇಂಥ ಸಂಧರ್ಭದಲ್ಲಿ ವೈದ್ಯರು ಸಿಸೇರಿಯನ್ ಹೆರಿಗೆಯನ್ನೇ ಆಯ್ಕೆ ಮಾಡಬೇಕಾಗುತ್ತದೆ.

### ಪತ್ತೆ ಹೇಗೆ?

ಗರ್ಭಕೋಶದ ಗಡ್ಡೆಗಳನ್ನು ಆಂತರಿಕ ಪರೀಕ್ಷೆ ಮೂಲಕ ಕಂಡುಹಿಡಿಯಬಹುದಾದರೂ, ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ನಿಖರವಾಗಿ ಪತ್ತೆ ಹಚ್ಚಬಲ್ಲದು. ಗಡ್ಡೆ ಬಹಳ ದೊಡ್ಡದಾಗಿದ್ದರೆ ಗರ್ಭಕೋಶದ ಹಿಗ್ಗುವಿಕೆ ಉಂಟಾಗುತ್ತದೆ. ಗರ್ಭಾಶಯದ ಒಳಗಿರುವ ಮಾಂಸಖಂಡಗಳಲ್ಲಿ ಗಡ್ಡೆಗಳು ಬೆಳೆಯುವ ಸಾಧ್ಯತೆ ಹೆಚ್ಚು. ಆದರೆ ಕೆಲವರಿಗೆ ಗರ್ಭಕೋಶದ ಹೊರಗಿನ ಗೋಡೆಗಳಲ್ಲೂ ಗಡ್ಡೆ ಬೆಳೆಯಬಹುದು.

ಗರ್ಭಾಶಯದ ನಾರುಗಡ್ಡೆಗಳು ಯಾವುದೇ ಗುಣಲಕ್ಷಣಗಳನ್ನು ತೋರಿಸುವುದಿಲ್ಲ. ಮಾಸಿಕಸ್ರಾವದ ಸಮಯದಲ್ಲಿ ಅತಿಯಾದ ರಕ್ತಸ್ರಾವ, ವಾರಗಟ್ಟಲೆ ರಕ್ತಸ್ರಾವ ಆಗುವುದು, ಪೆಲ್ವಿಕ್ ನೋವು, ಆಗಾಗ ಮೂತ್ರವಿಸರ್ಜನೆ ಸಮಸ್ಯೆ, ಮಲಬದ್ಧತೆ, ಕಾಲುಗಳಲ್ಲಿ ಸೆಳೆತ, ಗಡ್ಡೆ ದೊಡ್ಡದಾಗಿದ್ದರೆ ಅದು ಕಿಡ್ನಿ ಸಮಸ್ಯೆಗೂ ನಾಂದಿ ಹಾಡಬಹುದು.




### ಚಿಕಿತ್ಸೆ ಏನು?

ನಾರುಗಡ್ಡೆಗಳಿಂದ ಯಾವುದೇ ಸಮಸ್ಯೆ ಉಂಟಾಗದಿದ್ದರೆ ಮಹಿಳೆ ಈ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ. ಸಣ್ಣಸಣ್ಣ ಗಡ್ಡೆಗಳಿದ್ದರೆ ಔಷಧಿ ಹಾಗೂ ಹಾರ್ಮೋನ್ ಬದಲಾವಣೆ ಚಿಕಿತ್ಸೆ (**hormonal replacement therapy**) ಉಪಯೋಗಕ್ಕೆ ಬರಬಹುದು. ಬಹುತೇಕ ದೊಡ್ಡ ಗಡ್ಡೆಗಳಿದ್ದರೆ ಶಸ್ತ್ರಚಿಕಿತ್ಸೆಯೊಂದೇ ದಾರಿ. ಗರ್ಭಾಶಯ ಗಡ್ಡೆಗಳನ್ನು ಕರಗಿಸಲು ಹಾಗೂ ಈಸ್ಟ್ರೋಜನ್ ಮಟ್ಟ ಕಡಿಮೆ ಮಾಡುವ ಔಷಧಿಗಳು ಇದ್ದರೂ ಆರು ತಿಂಗಳಷ್ಟೇ ಸೇವಿಸಬಹುದು. ಇದರಿಂದ ಅಡ್ಡಪರಿಣಾಮ ಉಂಟಾಗುವ ಅಪಾಯವೂ ಇದೆ. ಗಡ್ಡೆಯ ಗಾತ್ರ ತೀರಾ ದೊಡ್ಡದಿದ್ದರೆ ಕೀಹೋಲ್ ಸರ್ಜರಿ ಅಥವಾ ಮಯೊಮೆಕ್ಟಮಿ, ಹಿಸ್ಟರೆಕ್ಟಮಿ ಮೂಲಕ ತೆರವುಗೊಳಿಸಬಹುದು. ಹಿಸ್ಟರೆಕ್ಟಮಿ ಅಥವಾ ಗರ್ಭಕೋಶ ತೆಗೆದುಹಾಕುವ ಶಸ್ತ್ರಚಿಕಿತ್ಸೆ ಹಾಗೂ ಮಯೊಮೆಕ್ಟಮಿ (ಗರ್ಭಕೋಶ ಹಾಗೇ ಇಟ್ಟು ಗಡ್ಡೆಗಳನ್ನು ಮಾತ್ರ ತೆಗೆದುಹಾಕುವ ಶಸ್ತ್ರಚಿಕಿತ್ಸೆ), ಅನುಕೂಲವಾಗಬಹುದು. ಲ್ಯಾಪರೊಸ್ಕೋಪಿಕ್ ಶಸ್ತ್ರಚಿಕಿತ್ಸೆ ಎಂದರೆ ಕನಿಷ್ಠ ಗಾಯದ ಮೂಲಕ ಗಡ್ಡೆಗಳನ್ನು ತೆಗೆಯಬಹುದು. ಗರ್ಭಿಣಿಯರಲ್ಲೂ ಗರ್ಭಾಶಯ ಗಡ್ಡೆ ಬರುವ ಸಾಧ್ಯತೆ ಇರುತ್ತದೆ. ಆದರೆ ಸಿಸೇರಿಯನ್ ಹೆರಿಗೆ ಮಾಡುವ ಸಂದರ್ಭದಲ್ಲಿ ಈ ಗಡ್ಡೆಗಳನ್ನು ತೆಗೆದುಹಾಕಬಹುದು.

ಡಾ. ವಿದ್ಯಾ ವಿ. ಭಟ್ ಬೆಂಗಳೂರಿನಲ್ಲಿ ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞೆ.
ಸಂಪರ್ಕ: 98801 28666